# ಮಡಿಲಲ್ಲಿ ಮಗು! ಕಣ್ಣೆದುರಲ್ಲಿ ಬೆಳೆದ ಮಗ!

## ಫ್ರಾನ್ಸ್

ಫ್ರಾನ್ಸ್ ಬಗ್ಗೆ ಮಾತನಾಡಿದಾಗ, ಪ್ಯಾರಿಸ್ ಬಗ್ಗೆ ಮಾತ್ರ ಯೋಚಿಸುತ್ತೇವೆ. ಫ್ರಾನ್ಸ್‌ನಲ್ಲಿ ಅನೇಕ ಗ್ರಾಮೀಣ ಪ್ರದೇಶಗಳಿವೆ; ಅವುಗಳಲ್ಲಿ ಹಳ್ಳಿಗಳ ಆಕರ್ಷಕ ದೃಶ್ಯಗಳನ್ನು ಕಾಣಬಹುದು. ಮಾರ್ಕೋನ ತಂದೆ–ತಾಯಿ ದೂರದ ಪರ್ವತ ಪ್ರದೇಶದ ಫೋಂಟನ್ ಹಳ್ಳಿಯಲ್ಲಿ ವಾಸಿಸುತ್ತಿದ್ದರು. ನೀಸ್ ನಗರದಿಂದ ಫೋಂಟನ್ ಹಳ್ಳಿಗೆ ಹೋಗಲು ಬಸ್ ಹಿಡಿಯಬೇಕಿತ್ತು ಅಥವಾ ಟ್ಯಾಕ್ಸಿಯಲ್ಲಿ ಹೋಗಬೇಕಿತ್ತು.

ಮದುವೆಯಾಗಿ ಕೆಲವು ದಿನಗಳು ಕಳೆದ ನಂತರವೇ ಮಾರ್ಕೋನೊಂದಿಗೆ ನಾನು ಫೋಂಟನ್‌ಗೆ ಹೋಗಬೇಕಾಯಿತು. ಕೋಪನ್‌ಹೇಗನ್‌ನಿಂದ ನೀಸ್‌ಗೆ ವಿಮಾನದಲ್ಲಿ ಹೋಗಿ, ನಂತರ ಬಸ್ ಹಿಡಿದೆವು. ಅವನ ತಂದೆ–ತಾಯಿ ಒಂದು ವಿಶಾಲ ಮನೆಯಲ್ಲಿ ವಾಸಿಸುತ್ತಿದ್ದರು. ಅವರದೇ ಆದ ಬದುಕುವ ಒಂದು ವಿಧಾನವಿತ್ತು. ನಮ್ಮ ನಡುವೆ ಸಂಬಂಧದ ಸಾಮೀಪ್ಯತೆ ಮಾತ್ರವಿದ್ದು, ನಾವು ಅನೇಕ ವಿಷಯಗಳಲ್ಲಿ ಪರಸ್ಪರ ದೂರದಲ್ಲಿದ್ದೆವು. ಭಾಷೆಯ ತೊಡಕಿತ್ತು; ಮಾರ್ಕೋನ ತಂದೆಯೊಂದಿಗೆ ಮಾತ್ರ ಕೆಲವು ಮಾತುಕತೆಗಳು ಸಾಧ್ಯವಿತ್ತು. ಅವರು ಅಲ್ಪ ಸ್ವಲ್ಪ ಇಂಗ್ಲಿಷ್ ಮಾತನಾಡುತ್ತಿದ್ದರು. ಅವರು ಕೆಲವು ಕಾಲ ಆರ್ಮಿಯಲ್ಲಿ ಕೆಲಸ ಮಾಡಿದ್ದರು, ಹೀಗಾಗಿ ಅಲ್ಲಿ ಇಂಗ್ಲಿಷ್ ಕಲಿಯಬೇಕಾಗಿತ್ತು. ತಾಯಿ ಅಲಿಸಾಗೆ ಲೇಶಮಾತ್ರವೂ ಇಂಗ್ಲಿಷ್ ಅರ್ಥವಾಗುತ್ತಿರಲಿಲ್ಲ. ಅವರೊಂದಿಗೆ ಮಾತನಾಡುವಾಗ ನನಗೆ ಅನುವಾದಕರ ಅವಶ್ಯಕತೆಯುಂಟಾಗುತ್ತಿತ್ತು. ಮಾರ್ಕೋ ತಂದೆ ನನಗೆ ಹೇಳಿದರು, 'ಫ್ರೆಂಚರಿಗೆ ಇಂಗ್ಲಿಷ್ ಕಲಿಯುವ ಅಗತ್ಯವಿಲ್ಲ. ಜಗತ್ತಿನ ಮೂವತ್ತು ಕೋಟಿ ಜನ ಫ್ರೆಂಚ್ ಭಾಷೆಯನ್ನು ಮಾತನಾಡುತ್ತಾರೆ. ನಮ್ಮೊಂದಿಗೆ ಮಾತನಾಡಬೇಕಿದ್ದರೆ ಫ್ರೆಂಚ್ ಕಲಿಯಬೇಕು.'

'ನಾನು ಖಂಡಿತ ಫ್ರೆಂಚ್ ಭಾಷೆಯನ್ನು ಕಲಿಯುತ್ತೇನೆ' ಎಂದು ವಿನಯದಿಂದ ಹೇಳಿದೆ.

'ನೀನು ಡ್ಯಾನಿಶ್ ಭಾಷೆಯನ್ನು ಕಲಿಯಲಿಲ್ಲ, ಈಗ ಫ್ರೆಂಚ್ ಕಲಿಯುವುದಾಗಿ ಹೇಳ್ತಿದ್ದೀಯ' ಮಾರ್ಕೋ ವ್ಯಂಗ್ಯವಾಡಿದ.

ಪ್ರಸ್ತುತ ನಾನು ಆಶ್ಚರ್ಯದಿಂದ ಅವರ ವಿಶಾಲ ಬಂಗ್ಲೆಯನ್ನು ಸುತ್ತು ಹಾಕುತ್ತಿದ್ದೆ. ಬರ್ನಾರ್ಡ್ ಮತ್ತು ಅಲಿಸಾ ಇಬ್ಬರೂ ನನ್ನೊಂದಿಗಿದ್ದು, ತಮ್ಮ ಮನೆಯನ್ನು ತೋರಿಸುತ್ತಿದ್ದರು. ಡ್ರಾಯಿಂಗ್‌ರೂಮ್, ಡೈನಿಂಗ್‌ರೂಮ್, ಬೆಡ್‌ರೂಮ್, ಗೆಸ್ಟ್‌ರೂಮ್, ಅಡುಗೆ ಮನೆ, ವರಾಂಡಗಳು, ಅಂಗಳ, ಓಣಿ, ಲಾನ್, ಕೈತೋಟ ಮತ್ತು ಸ್ವಿಮಿಂಗ್ ಪೂಲ್‌ಗಳು ಅನೇಕ ಮನೆಗಳಲ್ಲಿರುತ್ತವೆ. ಆದರೆ ನನ್ನ ಆಶ್ಚರ್ಯಕ್ಕೆ ಕಾರಣವೇನೆಂದರೆ, ಮಾರ್ಕೋನ ತಂದೆ–ತಾಯಿಯ ಅಪಾರ್ಟ್‌ಮೆಂಟ್‌ಗಳು ಬೇರೆಬೇರೆಯಾಗಿದ್ದವು, ಮಧ್ಯದಲ್ಲಿದ್ದ ಒಂದು ಓಣಿ ಎರಡೂ ಅಪಾರ್ಟ್‌ಮೆಂಟ್‌ಗಳನ್ನು ಕೂಡಿಸುತ್ತಿತ್ತು. ಅಲಿಸಾ ಫ್ರೆಂಚ್ ಭಾಷೆಯಲ್ಲಿ ಏನೋ ಹೇಳಿದಳು, ಅದನ್ನು ಕೇಳಿ ಬರ್ನಾರ್ಡ್ ಗಟ್ಟಿಯಾಗಿ ನಗುತ್ತಾ, ಅದನ್ನು ಇಂಗ್ಲಿಷಿಗೆ ಅನುವಾದಿಸಿ ಹೇಳಿದರು, 'ಒಂದು ವಯಸ್ಸಿನ ನಂತರ ಪತಿ–ಪತ್ನಿಗೆ ಪ್ರೈವೆಸಿ ಬೇಕಾಗುತ್ತದೆ, ಅವರ ವೈಯಕ್ತಿಕ ಜೀವನದ ವೃತ್ತ ಹೆಚ್ಚು ವ್ಯಾಪಿಸುತ್ತದೆ ಎಂದು ಇವಳು ಹೇಳುತ್ತಿದ್ದಾಳೆ.'

ಮೊದಲು ನಾವು ಬರ್ನಾರ್ಡ್‌ರ ಮನೆಯೊಳಗೆ ಹೋದೆವು: ಒಂದು ವಿಶಾಲ ಬೆಡ್‌ರೂಮ್, ಒಂದು ಕಡೆ ಬೆಡ್, ಇನ್ನೊಂದು ಕಡೆ ಸೋಫಾಗಳನ್ನು ಹಾಕಲಾಗಿತ್ತು. ಬಾರನ್ನು ಅಲಂಕರಿಸಲಾಗಿತ್ತು. ಒಂದು ಸ್ಟಡಿ ರೂಮಿತ್ತು. ದೊಡ್ಡ ಬಾತ್‌ರೂಮ್, ಅದಕ್ಕೆ ಅಂಟಿಕೊಂಡಂತೆ ಡ್ರೆಸಿಂಗ್ ರೂಮ್, ಅಲ್ಲಿದ್ದ ದೊಡ್ಡ ಗಾಜಿನ ಅಲ್ಮಾರಿನಲ್ಲಿ ಅವರ ಕೆಲವು ವಿಶೇಷ ಉಡುಪುಗಳನ್ನು ನೇತು ಹಾಕಲಾಗಿತ್ತು. ಮಿಲಿಟ್ರಿ ಯೂನಿಫಾರ್ಮ್, ಹಂಟಿಂಗ್ ಡ್ರೆಸ್... ಬರ್ನಾರ್ಡ್, 'ನಾನು ನನ್ನ ಯೌವನದಲ್ಲಿ ಇವುಗಳನ್ನು ಧರಿಸುತ್ತಿದ್ದೆ' ಎಂದು ಹೇಳಿದರು. ಗಾಜಿನ ಅಲ್ಮಾರಿ ಒಂದು ಸಂಗ್ರಹಾಲಯದಂತೆ ಕಂಡಿತು, ಅಲ್ಲಿ ಉಡುಪುಗಳ ಪ್ರದರ್ಶನ ಇರುವಂತೆ ತೋರುತ್ತಿತ್ತು.

ಬಾತ್‌ರೂಮ್ ಸಹ ತುಂಬಾ ಶೋಕಿಯಾಗಿತ್ತು. ಫೌಂಟೇನ್‌ಗಳಲ್ಲಿನ ಒತ್ತಡಕ್ಕೆ ನೀರಿನ ಪ್ರವಾಹ ಬದಲಾಗುತ್ತದೆ, ಇವು ಫಿಸಿಯೊಥೆರಪಿಯಂತೆ ಕೆಲಸ ಮಾಡುತ್ತವೆ ಎಂದು ಬರ್ನಾರ್ಡ್ ನನಗೆ ಸ್ಪಷ್ಟಪಡಿಸಿದರು. ನಂತರ ಅವರು ಸ್ಟಡಿ ರೂಮಿನಲ್ಲಿದ್ದ ದೊಡ್ಡ ಮತ್ತು ಅಗಲದ ಗಾಜಿನ ಕಿಡಕಿಯಿಂದ ಹೊರಗೆ ಸಂಜ್ಞೆ ಮಾಡಿ ತೋರಿಸುತ್ತಾ ಹೇಳಿದರು, 'ನನಗೆ ಇಲ್ಲಿಂದ ನನ್ನ

